ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನ ಸಭೆ
ಹದಿಮೂರನೇ ಅಧಿವೇಶನ
(ಮುಂದುವರೆದ ಉಪವೇಶನ)

# ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-11)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು 2017ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 30ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 30ನೇ ಪ್ರಕರಣದ (ಎಫ್) ಖಂಡದ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(ಜಿ) ಋಣದ ಪಾವತಿಪತ್ರದ ಸಂದರ್ಭದಲ್ಲಿ [ಅನು.1(i)] – ಋಣದಾರನಿಂದ;

(ಎಚ್) ಪತ್ರ, ವಸ್ತುಗಳು ಇತ್ಯಾದಿಗಳ ಸಂದರ್ಭದಲ್ಲಿ [ಅನು.1(ii)] – ಪತ್ರ, ವಸ್ತುಗಳು ಇತ್ಯಾದಿಗಳ ಮಾಲೀಕತ್ವದಲ್ಲಿರುವ ವ್ಯಕ್ತಿಯಿಂದ;

(ಐ) ದತ್ತಕಪತ್ರದ ಸಂದರ್ಭದಲ್ಲಿ [ಅನು.3] – ದತ್ತಕಕ್ಕೆ ಪಡೆಯುವವನಿಂದ;

(ಜೆ) ಅಫಿದಾವಿತ್ತಿನ ಸಂದರ್ಭದಲ್ಲಿ [ಅನು.4] – ಬರೆದುಕೊಡುವವನಿಂದ;

(ಕೆ) ವಿನಿಮಯಪತ್ರದ ಮಾರಾಟಕ್ಕಾಗಿನ ಒಪ್ಪಂದದ ಸಂದರ್ಭದಲ್ಲಿ [ಅನು.5(ಎ)] – ಖರೀದಿದಾರನಿಂದ;

(ಎಲ್) ಸರ್ಕಾರಿ ಭದ್ರತೆಯ ಖರೀದಿ ಅಥವಾ ಮಾರಾಟಕ್ಕಾಗಿನ ಒಪ್ಪಂದದ ಸಂದರ್ಭದಲ್ಲಿ [ಅನು.5(ಬಿ)] – ಖರೀದಿದಾರನಿಂದ;

(ಎಮ್) ಷೇರುಗಳು ಮತ್ತು ಸ್ಟಾಕ್‌ಗಳ ಖರೀದಿ ಅಥವಾ ಮಾರಾಟಕ್ಕಾಗಿನ ಒಪ್ಪಂದದ ಸಂದರ್ಭದಲ್ಲಿ [ಅನು.5(ಸಿ)] – ಖರೀದಿದಾರನಿಂದ;

(ಎನ್) ಗುತ್ತಿಗೆ ಹಾಗೂ ಮಾರಾಟದ ವ್ಯವಹಾರಕ್ಕಾಗಿ ಒಪ್ಪಂದದ ಸಂದರ್ಭದಲ್ಲಿ [ಅನು.5(ಡಿ)] – ಗುತ್ತಿಗೆದಾರನಿಂದ;

(ಒ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಜಾರಿಗೊಳಿಸಿದ ಯಾವುದೇ ಗುತ್ತಿಗೆ ಹಾಗೂ ಮಾರಾಟದ ಯಾವುದೇ ಲಿಖಿತಪತ್ರದ ಸಂದರ್ಭದಲ್ಲಿ [ಅನು.5(ಡಿಎ)] – ಗುತ್ತಿಗೆದಾರನಿಂದ;

(ಪಿ) ಸ್ಥಿರ ಸ್ವತ್ತಿನ ಮಾರಾಟಕ್ಕಾಗಿನ ಒಪ್ಪಂದದ ಸಂದರ್ಭದಲ್ಲಿ [ಅನು.5(ಇ)] – ಖರೀದಿದಾರನಿಂದ;

(ಕ್ಯು) ಸ್ಥಿರ ಸ್ವತ್ತಿನ ನಿರ್ಮಾಣ ಅಥವಾ ಅಭಿವೃದ್ಧಿಗಾಗಿನ ಒಪ್ಪಂದದ ಸಂದರ್ಭದಲ್ಲಿ [ಅನು.5(ಎಫ್)] – ಅಭಿವೃದ್ಧಿದಾರನಿಂದ;

(ಆರ್) ಚರ ಸ್ವತ್ತಿನ ಮಾರಾಟಕ್ಕಾಗಿನ ಒಪ್ಪಂದದ ಸಂದರ್ಭದಲ್ಲಿ [ಅನು.5(ಜಿ)] – ಖರೀದಿದಾರನಿಂದ;

(ಎಸ್) ಅಡಮಾನಕ್ಕೆ ಒಪ್ಪಂದದ ಸಂದರ್ಭದಲ್ಲಿ [ಅನು.5(ಹೆಚ್)] – ಅಡಮಾನದಾರನಿಂದ;

(ಟಿ) ಡಿ–ಮ್ಯಾಟ್ ಲೆಕ್ಕ ಖಾತೆ ತೆರೆಯುವುದಕ್ಕಾಗಿ ಠೇವಣಿದಾರ ಭಾಗಿಗಳು ಮತ್ತು ಕಕ್ಷಿದಾರರ ನಡುವಿನ ಕರಾರಿನ ಸಂದರ್ಭದಲ್ಲಿ [ಅನು.5(ಐ)] – ಕಕ್ಷಿದಾರನಿಂದ;

(ಯು) ಸ್ಟಾಕ್ ಮಾರುಕಟ್ಟೆ ಕಾರ್ಯನಿರ್ವಹಣೆ ಸ್ಟಾಕ್ ಬ್ರೋಕರ್ (ಏಜೆಂಟ್) ಅಥವಾ ಸಬ್–ಬ್ರೋಕರ್ ಮತ್ತು ಕಕ್ಷಿದಾರರ (ಪ್ರಧಾನಕರ್ತ) ಇವರ ನಡುವಿನ ಕರಾರಿನ ಸಂದರ್ಭದಲ್ಲಿ [ಅನು.5 (ಐ–ಎ)] – ಕಕ್ಷಿದಾರನಿಂದ;

(ವಿ) ವ್ಯವಹಾರವನ್ನು ಮೇಲ್ದರ್ಜೆಗೇರಿಸುವುದಕ್ಕೆ ಮತ್ತು ಅಭಿವೃದ್ಧಿ ಪಡಿಸುವುದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಜಾಹೀರಾತು ಮಾಡುವ ಅಥವಾ ಪ್ರಸಾರ ಮಾಡುವ ಅಥವಾ ಬಿತ್ತರಿಸುವುದಕ್ಕೆ ಸಂಬಂಧಿಸಿದ ಒಪ್ಪಂದದ ಸಂದರ್ಭದಲ್ಲಿ [ಅನು.5(ಐ–ಬಿ)] – ಜಾಹಿರಾತುದಾರನಿಂದ;

(ಡಬ್ಲ್ಯು) ಬೌದ್ಧಿಕ ಸ್ವತ್ತಿನ ಹಕ್ಕುಗಳ ಹಸ್ತಾಂತರ ಅಥವಾ ವರ್ಗಾವಣೆಗೆ ಸಂಬಂಧಿಸಿದ ಒಪ್ಪಂದದ ಸಂದರ್ಭದಲ್ಲಿ [ಅನು.5(ಐ–ಸಿ)] – ಹಸ್ತಾಂತರ ಪಡೆದವನಿಂದ;

(ಎಕ್ಸ್) ಕಟ್ಟಡ ಕಾಮಗಾರಿಗಳಿಗೆ ಅಥವಾ ಕಾರ್ಮಿಕ ಸೇವೆಗಳಿಗೆ (ಕಾಮಗಾರಿಗಳ ಗುತ್ತಿಗೆಗಳು) ಸಂಬಂಧಿಸಿದ ಒಪ್ಪಂದದ ಸಂದರ್ಭದಲ್ಲಿ [ಅನು.5(ಐ–ಡಿ)] – ಕಾಮಗಾರಿಗಳನ್ನು ವಹಿಸುವ ಅಥವಾ ಸೇವೆಗಳನ್ನು ಲಭ್ಯಗೊಳಿಸುವ ವ್ಯಕ್ತಿಯಿಂದ;

(ವೈ) ಚಿಟ್ ಒಪ್ಪಂದದ ಸಂದರ್ಭದಲ್ಲಿ [ಅನು.5(ಐ–ಇ)] – ಚೀಟಿದಾರನಿಂದ;

(ಜಡ್) ಅನ್ಯಥಾ ಉಪಬಂಧಿಸಿಲ್ಲದ ಒಪ್ಪಂದದ ಸಂದರ್ಭದಲ್ಲಿ [ಅನು.5(ಜೆ)] – ಬರೆದುಕೊಡುವವನಿಂದ;

(ಜಡ್ಎ) ಅಧಿಕಾರದ ನಿರ್ವಹಣೆಯಲ್ಲಿ ಮಾಡಿದ ನೇಮಕಾತಿಯ ಸಂದರ್ಭದಲ್ಲಿ [ಅನು.7] – ಬರೆದುಕೊಡುವವನಿಂದ;

(ಜಡ್ಬಿ) ಬೆಲೆ ಕಟ್ಟುವ ಅಥವಾ ಮೌಲ್ಯ ನಿರ್ಣಯ ಮಾಡುವ ಸಂದರ್ಭದಲ್ಲಿ [ಅನು.8] – ಸೇವೆಗಳನ್ನು ಪಡೆಯುವ ವ್ಯಕ್ತಿಯಿಂದ;

(ಜಡ್ಸಿ) ಉಮೇದುವಾರಿಕೆ ಪತ್ರದ ಸಂದರ್ಭದಲ್ಲಿ [ಅನು.9] – ಉಮೇದುವಾರನಿಂದ;

(ಜಡ್ಡಿ) ಕಂಪನಿಯ ಸಂಘದ ನಿಯಮಾವಳಿಗಳ ಸಂದರ್ಭದಲ್ಲಿ [ಅನು.10] – ಕಂಪನಿಯಿಂದ;

(ಜಡ್ಇ) ಐತೀರ್ಪಿನ ಸಂದರ್ಭದಲ್ಲಿ [ಅನು.11] – ಐತೀರ್ಪುದಾರನಿಂದ;

(ಜಡ್ಎಫ್) ಲಿಖಿತಗಳ ರದ್ದಿಯಾತಿಯ ಸಂದರ್ಭದಲ್ಲಿ [ಅನು.14] – ಬರೆದುಕೊಡುವವನಿಂದ;

(ಜಡ್ಜಿ) ಯಾವುದೇ ಷೇರು, ಷೇರು ಪ್ರಮಾಣಪತ್ರ (scrip) ಅಥವಾ ಸ್ಟಾಕ್‌ಗೆ, ಅದರ ಧಾರಕನ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಸ್ವಾಮ್ಯವನ್ನು ಸಾಕ್ಷೀಕರಿಸುವ ಪ್ರಮಾಣಪತ್ರ ಅಥವಾ ಇತರ ದಸ್ತಾವೇಜಿನ ಸಂದರ್ಭದಲ್ಲಿ [ಅನು.16] – ಷೇರು, ಷೇರು ಪ್ರಮಾಣಪತ್ರ ಅಥವಾ ಸ್ಟಾಕ್‌ಅನ್ನು ನೀಡುವ ಕಂಪನಿಯಿಂದ;

(ಜಡ್ಹೆಚ್) ಹಡಗು ಬಾಡಿಗೆ ಕರಾರಿನ ಸಂದರ್ಭದಲ್ಲಿ [ಅನು.18] – ಹಡಗು ಬಾಡಿಗೆ ಪಡೆಯುವವನು ಅಥವಾ ಹಡುಗು ಸಾಗಣೆ ವ್ಯಾಪಾರಿಯಿಂದ;

(ಜಡ್ಐ) ತೀರುವಳಿ ಪಟ್ಟಿಯ ಸಂದರ್ಭದಲ್ಲಿ [ಅನು. 18–ಎ] – ಹೂಡಿಕೆದಾರರಿಂದ;

(ಜಡ್ಜೆ) ಒಡಂಬಡಿಕೆ ಪತ್ರದ ಸಂದರ್ಭದಲ್ಲಿ [ಅನು. 19] – ಋಣದಾರನಿಂದ

(ಜಡ್ಕೆ) ಪ್ರತಿ ಅಥವಾ ಉದ್ಧೃತ ಭಾಗದ ಸಂದರ್ಭದಲ್ಲಿ [ಅನು. 21] – ಅರ್ಜಿದಾರನಿಂದ;

(ಜಡ್ಎಲ್) ಪ್ರತಿರೂಪ ಅಥವಾ ದ್ವಿಪ್ರತಿಯ ಸಂದರ್ಭದಲ್ಲಿ [ಅನು.22] – ಮೂಲ ದಸ್ತಾವೇಜಿನ ಸ್ಟಾಂಪ್ ಸುಂಕವನ್ನು ಸಂದಾಯ ಮಾಡುವ ವ್ಯಕ್ತಿಯಿಂದ;

(ಜಡ್ಎಮ್) ಸರಕುಗಳ ಸಂಬಂಧಿತ ವಶಾವಣೆ ಆದೇಶದ ಸಂದರ್ಭದಲ್ಲಿ [ಅನು.24] – ಆಮದುದಾರನಿಂದ;

(ಜಡ್ಎನ್) ವಿವಾಹ ವಿಚ್ಛೇಧನ ಲಿಖಿತಪತ್ರದ ಸಂದರ್ಭದಲ್ಲಿ [ಅನು.25] – ವಿಚ್ಛೇಧನ ಪಡೆಯುವವರಿಂದ;

(ಜಡ್ಒ) ದಾನಪತ್ರದ ಸಂದರ್ಭದಲ್ಲಿ [ಅನು. 28] – ದಾನಿಯಿಂದ;

(ಜಡ್ಪಿ) ಯಾವುದೇ ಕಂಪನಿಯಲ್ಲಿ, ಷೇರುಗಳ ಹಂಚಿಕೆ ಪತ್ರದ ಸಂದರ್ಭದಲ್ಲಿ [ಅನು.31] – ಕಂಪನಿಯಿಂದ;

(ಜಡ್ಕ್ಯು) ಲೈಸೆನ್ಸುಪತ್ರದ ಸಂದರ್ಭದಲ್ಲಿ [ಅನು.32] – ಋಣದಾರನಿಂದ;

(ಜಡ್ಆರ್) ಸ್ಥಿರ ಅಥವಾ ಚರ ಸ್ವತ್ತಿನ ಲೈಸೆನ್ಸ್‌ನ ಸಂದರ್ಭದಲ್ಲಿ [ಅನು.32–ಎ] – ಲೈಸೆನ್ಸುದಾರನಿಂದ;

(ಜಡ್ಎಸ್) ಕಂಪನಿಯ ಸಂಘದ ಜ್ಞಾಪನಪತ್ರದ ಸಂದರ್ಭದಲ್ಲಿ [ಅನು.33] – ಕಂಪನಿಯಿಂದ;

(ಜಡ್ಟಿ) ಫಸಲಿನ ಅಡಮಾನದ ಸಂದರ್ಭದಲ್ಲಿ [ಅನು.35] – ಅಡಮಾನದಾರನಿಂದ;

(ಜಡ್ಯು) ನೋಟರಿ ಕಾರ್ಯದ ಸಂದರ್ಭದಲ್ಲಿ [ಅನು.36] – ಅರ್ಜಿದಾರನಿಂದ;

(ಜಡ್ವಿ) ದಲ್ಲಾಳಿ ಅಥವಾ ಏಜಂಟನು ಕಳುಹಿಸುವ – ಟಿಪ್ಪಣಿ ಅಥವಾ ಜ್ಞಾಪನಪತ್ರ ಅಥವಾ ವ್ಯವಹಾರಗಳ ದಾಖಲೆ (ವಿದ್ಯುನ್ಮಾನ ಅಥವಾ ಇತರ ರೀತಿಯ) ಸಂದರ್ಭದಲ್ಲಿ [ಅನು.37] – ಹೂಡಿಕೆದಾರರಿಂದ;

(ಜಡ್ಡಬ್ಲ್ಯು) ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯ ಪತ್ರದ ಸಂದರ್ಭದಲ್ಲಿ [ಅನು.38] – ಬಾಡಿಗೆ ತೆಗೆದುಕೊಂಡಿರುವವರಿಂದ ಅಥವಾ ಹಡಗುದಾರರಿಂದ ಅಥವಾ ಸರಕು ಪಡೆಯುವವರಿಂದ ಅಥವಾ ಸಂದರ್ಭಾನುಸಾರವಾಗಿ ಆಮದುದಾರರಿಂದ;

(ಜಡ್ಎಕ್ಸ್) ಪಾಲುದಾರಿಕೆಯ ಸಂದರ್ಭದಲ್ಲಿ– ರಚನೆಯ ಲಿಖಿತ ಪತ್ರವು [ಅನು.40–ಎ] – ಪಾಲುದಾರಿಕೆ ಫರ್ಮಿನಿಂದ;

(ಜಡ್ವೈ) ಪಾಲುದಾರಿಕೆಯ– ಪುನಾರಚನೆಯ ಲಿಖಿತ ಪತ್ರದ ಸಂದರ್ಭದಲ್ಲಿ [ಅನು.40–ಬಿ] – ಪಾಲುದಾರಿಕೆ ಫರ್ಮಿನಿಂದ;

(ಜಡ್ಜಡ್) ಪಾಲುದಾರಿಕೆಯ – ವಿಘಟನೆಯ ಲಿಖಿತ ಪತ್ರದ ಸಂದರ್ಭದಲ್ಲಿ [ಅನು.40–(ಸಿ)(ಎ)] – ಸ್ವತ್ತು ಹಂಚಿಕೆಯಾದ ಹೊರ ಹೋಗುತ್ತಿರುವ ಪಾಲುದಾರನಿಂದ;

(ಜಡ್‌ಜಡ್‌ಎ) ಯಾವುದೇ ಇತರ ಪ್ರಕರಣದ ಸಂದರ್ಭದಲ್ಲಿ– [ಅನು.40–(ಸಿ)(ಬಿ)] – ಪಾಲುದಾರಿಕೆ ಫರ್ಮಿನಿಂದ;

(ಜಡ್‌ಜಡ್‌ಬಿ) ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯ ಸಂದರ್ಭದಲ್ಲಿ– [ಅನು.40–ಎ] – ಸೀಮಿತ ಹೊಣೆಗಾರಿಕೆ ಪಾಲುದಾರಿಕೆಯಿಂದ;

(ಜಡ್‌ಜಡ್‌ಸಿ) ಹುಂಡಿಯ ಅಥವಾ ನೋಟಿನ ಪ್ರಸಾಕ್ಷ್ಯದ ಸಂದರ್ಭದಲ್ಲಿ– [ಅನು.42] – ಫಲಾನುಭವಿಯಿಂದ;

(ಜಡ್‌ಜಡ್‌ಡಿ) ಹಡಗಿನ ಯಜಮಾನನು ಮಾಡಿದ ಪ್ರಸಾಕ್ಷ್ಯದ ಸಂದರ್ಭದಲ್ಲಿ [ಅನು.43] –ಬಾಡಿಗೆ ತೆಗೆದುಕೊಂಡಿರುವವರಿಂದ ಅಥವಾ ಹಡಗುದಾರರಿಂದ ಅಥವಾ ಸರಕು ಪಡೆಯುವವರಿಂದ ಅಥವಾ ಸಂದರ್ಭಾನುಸಾರವಾಗಿ ಆಮದುದಾರರಿಂದ;

(ಜಡ್‌ಜಡ್‌ಇ) ಕಂಪೆನಿಗಳ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಷೇರು ವಾರಂಟುಗಳ ಧಾರಕನ ಸಂದರ್ಭದಲ್ಲಿ [ಅನು.49] – ಕಂಪನಿಯಿಂದ;

(ಜಡ್‌ಜಡ್‌ಎಫ್) ಹಡಗು ಸಾಗಣೆ ಆದೇಶದ ಸಂದರ್ಭದಲ್ಲಿ [ಅನು.50] – ಹಡಗುದಾರನಿಂದ;

(ಜಡ್‌ಜಡ್‌ಜಿ) ಗೇಣಿಯನ್ನು ಬಿಟ್ಟುಕೊಡುವ ಸಂದರ್ಭದಲ್ಲಿ [ಅನು.51] –ಗೇಣಿದಾರನಿಂದ;

(ಜಡ್‌ಜಡ್‌ಎಚ್) ಅಡ್ಮಿನಿಸ್ಟ್ರೇಟರ್ ಜನರಲ್ ಅಧಿನಿಯಮ, 1963ರ 25ನೇ ಪ್ರಕರಣದ ಮೇರೆಗಿನ ಯಾವುದೇ ಸ್ವತ್ತಿನ ವರ್ಗಾವಣೆಯ ಸಂದರ್ಭದಲ್ಲಿ [ಅನು.52–(ಸಿ)] – ಫಲಾನುಭವಿಯಿಂದ;

(ಜಡ್‌ಜಡ್‌ಐ) ವರ್ಗಾವಣೆಯಾಗುತ್ತಿರುವ ಯಾವುದೇ ನ್ಯಾಸದ ಸ್ವತ್ತಿನ ಸಂದರ್ಭದಲ್ಲಿ [ಅನು.52–(ಡಿ)] – ನ್ಯಾಸದಿಂದ ಅಥವಾ ನ್ಯಾಸಧಾರಿಯಿಂದ ಅಥವಾ ಸಂದರ್ಭಾನುಸಾರವಾಗಿ ಫಲಾನುಭವಿಯಿಂದ;

(ಜಡ್‌ಜಡ್‌ಜೆ) ಗೇಣಿಯ ವರ್ಗಾವಣೆ ಸಂದರ್ಭದಲ್ಲಿ [ಅನು.53] –ವರ್ಗಾಯಿಸುವವನಿಂದ;

(ಜಡ್‌ಜಡ್‌ಕೆ) ಅನುಜ್ಞಾಪತ್ರದ ವರ್ಗಾವಣೆ ಸಂದರ್ಭದಲ್ಲಿ– [ಅನು.53–ಎ] ವರ್ಗಾಯಿಸುವವನಿಂದ;

(ಜಡ್‌ಜಡ್‌ಎಲ್) ನ್ಯಾಸದ ಘೋಷಣೆ ಅಥವಾ ಉಯಿಲು ಪತ್ರವಲ್ಲದ ಯಾವುದೇ ಸ್ವತ್ತಿನ ಸಂದರ್ಭದಲ್ಲಿ [ಅನು.54] –ನ್ಯಾಸದ ಮಾಲೀಕನಿಂದ; ಮತ್ತು

(ಜಡ್‌ಜಡ್‌ಎಮ್) ಸರಕುಗಳಿಗಾಗಿ ವಾರಂಟ್‌ನ ಸಂದರ್ಭದಲ್ಲಿ [ಅನು.55] – ಸರಕುಗಳ ಮಾಲೀಕನಿಂದ;"

**3. 52–ಎ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 52–ಎ ಪ್ರಕರಣದಲ್ಲಿ,–

(i) (i)ನೇ ಖಂಡದಲ್ಲಿ ಕೊನೆಯಲ್ಲಿ ಬರುವ **"ಅಥವಾ"** ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) (ii)ನೇ ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**4. 52–ಬಿ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 52–ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**52–ಬಿ. ಸ್ಟಾಂಪುಗಳನ್ನು ಅಸಿಂಧುಗೊಳಿಸುವುದು.**– 47, 48, 49, 50, 51 ಮತ್ತು 52ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಖರೀದಿಸಿದ ಆದರೆ ಬಳಸದಿರುವ ಯಾವುವೇ ಸ್ಟಾಂಪುಗಳನ್ನು ಅಥವಾ ಅವುಗಳಿಗೆ ಸಂಬಂಧಪಟ್ಟಂತೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿರುವಂತೆ ಯಾವುದೇ ಭತ್ಯೆಯನ್ನು ಕ್ಲೇಮು ಮಾಡದಿರುವಲ್ಲಿ ಮತ್ತು ಅಂಥ ಸ್ಟಾಂಪುಗಳ ಖರೀದಿಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯು ಮುಕ್ತಾಯವಾಗದಿರುವಲ್ಲಿ, ಸ್ಟಾಂಪುಗಳನ್ನು ಖರೀದಿಸಿದ ಅಥವಾ ಅಧಿನಿಯಮದ ಸುಸಂಗತ ಉಪಬಂಧಗಳ ಅಡಿಯಲ್ಲಿ ಅವುಗಳನ್ನು ಕ್ಲೇಮು ಮಾಡುವುದಕ್ಕಾಗಿ ಅನುಮತಿಸಿದ ಅವಧಿಯೊಳಗೆ ಭತ್ಯೆಯನ್ನು ಕ್ಲೇಮು ಮಾಡುವುದಕ್ಕಾಗಿ ರವಾನಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಗೆ ಮೊದಲು; ಆದರೆ ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳ ಅವಧಿಯನ್ನು ಮೀರದ, ಇವುಗಳಲ್ಲಿ ಯಾವುದು ನಂತರವೋ ಆ ಅವಧಿಯೊಳಗೆ ಬಳಸಬಹುದು ಮತ್ತು ಮೇಲೆ ಹೇಳಿದ ಅವಧಿಯ ಒಳಗಾಗಿ ಹಾಗೆ ಬಳಸದಿರುವ ಅಥವಾ ಹಾಗೆ ರವಾನಿಸದಿರುವ ಯಾವುವೇ ಸ್ಟಾಂಪ್‌ಗಳನ್ನು ಅಸಿಂಧುಗೊಳಿಸತಕ್ಕದ್ದು."

**5. ಅನುಸೂಚಿಯ ತಿದ್ದುಪಡಿ.**– ಮೂಲ ಅಧಿನಿಯಮದ ಅನುಸೂಚಿಯಲ್ಲಿ,–

(ಎ) ಅನುಚ್ಛೇದ 20ರ (4)ನೇ ಖಂಡದ (2)ನೇ ಅಂಕಣದಲ್ಲಿ "ಕಂಪನಿಗಳ ಅಧಿನಿಯಮ, 1956ರ ಪ್ರಕರಣ 394ರ ಅಡಿಯಲ್ಲಿ ಉಚ್ಚ ನ್ಯಾಯಾಲಯವು" ಎಂಬ ಪದಗಳು ಮತ್ತು ಅಂಕಿಗಳಿಗೆ "ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಉಚ್ಚ ನ್ಯಾಯಾಲಯವು ಅಥವಾ ಯುಕ್ತ ನ್ಯಾಯಾಧಿಕರಣಗಳು ಅಥವಾ ಯುಕ್ತ ಪ್ರಾಧಿಕಾರಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) 37ನೇ ಅನುಚ್ಛೇದದಲ್ಲಿ,–

(i) (ಎ) ಖಂಡದಲ್ಲಿ (3)ನೇ ಅಂಕಣದಲ್ಲಿನ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–
"ಸರಕುಗಳು ಅಥವಾ ವ್ಯಾಪಾರ ಸರಕುಗಳು ಅಥವಾ ಕರೆನ್ಸಿಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ.";

(ii) (ಬಿ) ಖಂಡದಲ್ಲಿ (3)ನೇ ಅಂಕಣದಲ್ಲಿನ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭದ್ರತಾ ಪತ್ರಗಳ ಖರೀದಿ ಅಥವಾ ಸಂದರ್ಭಾನುಸಾರವಾಗಿ ಮಾರಾಟದ ಕಾಲದಲ್ಲಿ ಅಂಥ ಭದ್ರತಾ ಪತ್ರಗಳ ಮೌಲ್ಯದ ಮೇಲೆ, ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ";

**(iii)** (ಸಿ) ಖಂಡದಲ್ಲಿ (3)ನೇ ಅಂಕಣದಲ್ಲಿನ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಭದ್ರತಾ ಪತ್ರಗಳ ಖರೀದಿ ಅಥವಾ ಸಂದರ್ಭಾನುಸಾರವಾಗಿ ಮಾರಾಟದ ಕಾಲದಲ್ಲಿ ಅಂಥ ಭದ್ರತಾ ಪತ್ರಗಳ ಮೌಲ್ಯದ ಮೇಲೆ, ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ";

**(iv)** (ಡಿ) ಖಂಡದಲ್ಲಿ (3)ನೇ ಅಂಕಣದಲ್ಲಿನ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ.";

**(v)** (ಇ) ಖಂಡದಲ್ಲಿ (3)ನೇ ಅಂಕಣದಲ್ಲಿನ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ."; ಮತ್ತು

**(vi)** (ಎಫ್) ಖಂಡದಲ್ಲಿ (3)ನೇ ಅಂಕಣದಲ್ಲಿನ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಮೂವತ್ತು ಪೈಸೆ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾಡಿರುವ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲು ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**XXX**

**ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ, 34) ಉದ್ಧೃತ ಭಾಗ**

**Xx Xx Xx**

30. **ಯಾರಿಂದ ಸುಂಕಗಳು ಸಂದಾಯವಾಗಬೇಕು.**- ತದ್ವಿರುದ್ಧವಾದ ಒಪ್ಪಂದವು ಇಲ್ಲದೇ ಇರುವಲ್ಲಿ, ಸರಿಯಾದ ಸ್ಟಾಂಪನ್ನು ಒದಗಿಸುವ ವೆಚ್ಚವನ್ನು,-

**Xx Xx Xx**

(ಎಫ್) ವಿಭಜನೆಯ ಲಿಖಿತದ ಸಂದರ್ಭದಲ್ಲಿ - ವಿಭಜನೆಯಾದ ಇಡೀ ಸ್ವತ್ತಿನಲ್ಲಿ ಅವರವರ ಪಾಲುಗಳಿಗೆ ಪ್ರಮಾಣಾನುಸಾರವಾಗಿ ಅಥವಾ ಕಂದಾಯ ಪ್ರಾಧಿಕಾರಿ ಅಥವಾ ಸಿವಿಲ್ ನ್ಯಾಯಾಲಯ ಅಥವಾ ಮಧ್ಯಸ್ಥನು ಮಾಡಿದ ಆದೇಶದ ಅಮಲ್ ಜಾರಿಯಲ್ಲಿ ವಿಭಜನೆಯನ್ನು ಮಾಡಿದಾಗ ಅಂಥ ಪ್ರಾಧಿಕಾರಿ, ನ್ಯಾಯಾಲಯ ಅಥವಾ ಮಧ್ಯಸ್ಥನು ನಿರ್ದೇಶಿಸುವಂಥ ಪ್ರಮಾಣದಲ್ಲಿ ಅದಕ್ಕೆ ಪಕ್ಷಕಾರರು.

- ವಹಿಸತಕ್ಕದ್ದು,

**Xx Xx Xx**

52ಎ. **ಪರಿಹಾರವನ್ನು ಮಂಜೂರ್ಮಾಡಲು ರಾಜ್ಯ ಸರ್ಕಾರದ ಅಧಿಕಾರ.**- ಈ ಅಧ್ಯಾಯದ ಹಿಂದಿನ ಪ್ರಕರಣಗಳಲ್ಲಿ ಏನೇ ಇದ್ದಾಗ್ಯೂ, ರಾಜ್ಯ ಸರ್ಕಾರವು, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯೊಂದಿಗೆ ಸಮಾಲೋಚಿಸಿದ ತರುವಾಯ,-

(i) ಯಾವುವೇ ಸದರಿ ಪ್ರಕರಣಗಳು ಅನ್ವಯವಾಗಬಹುದಾದಂಥವುಗಳನ್ನು ಹೊರತು ಪಡಿಸಿ ಇತರ ಯಾವುದೇ ಪ್ರಕರಣ ಅಥವಾ ಪ್ರಕರಣಗಳ ವರ್ಗದಲ್ಲಿ; ಅಥವಾ

(ii) ಸದರಿ ಯಾವುದೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ, ಪರಿಹಾರವನ್ನು ಮಂಜೂರ್ಮಾಡುವುದು ನ್ಯಾಯ ಸಮ್ಮತ ಮತ್ತು ನ್ಯಾಯಯುತವೆಂದು ಅವನಿಗೆ ಮನವರಿಕೆಯಾದರೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪರಿಹಾರವನ್ನು ಮಂಜೂರ್ಮಾಡಲು ನಿರ್ದೇಶಿಸಬಹುದು ಮತ್ತು ಡೆಪ್ಯುಟಿ ಕಮಿಷನರರನು ಅಂಥ ಆದೇಶಕ್ಕೆ ಅನುಗುಣವಾಗಿ ಪ್ರಕರಣ ಅಥವಾ ಪ್ರಕರಣಗಳ ವರ್ಗವನ್ನು ವಿಲೆ ಮಾಡತಕ್ಕದ್ದು:

**Xx Xx Xx**

## ಅನುಸೂಚಿ

## ಲಿಖಿತಗಳ ಮೇಲಿನ ಸ್ಟಾಂಪ್ ಸುಂಕ

**Xx Xx Xx**

**20. ಹಸ್ತಾಂತರಣ ಪತ್ರ.– (1)** **Xx Xx Xx**

(4) ಕಂಪನಿಗಳ ಅಧಿನಿಯಮ, 1956ರ ಪ್ರಕರಣ 394ರ ಅಡಿಯಲ್ಲಿ ಉಚ್ಚ ನ್ಯಾಯಾಲಯವು ಮಾಡಿದ ಒಂದು ಆದೇಶಕ್ಕೆ ಸಂಬಂಧಪಟ್ಟಿದ್ದರೆ

**(i)** ಮಾತೃ ಕಂಪನಿಯೊಂದಿಗೆ ಪೂರಕ ವಿಲೀನವನ್ನೂ ಒಳಗೊಂಡಂತೆ ಕಂಪನಿಗಳ ವಿಲೀನದ ಸಂಬಂಧದಲ್ಲಿ,

**Xx Xx Xx**

**37.** ವ್ಯವಹಾರಗಳ (ವಿದ್ಯುನ್ಮಾನ ಅಥವಾ ಇತರ ರೀತಿಯ) ಟಿಪ್ಪಣಿ ಅಥವಾ ಜ್ಞಾಪನ ಪತ್ರ.–

**Xx Xx Xx**

| | |
|---|---|
| (ಎ) ಯಾವುದೇ ಸರಕುಗಳು ಅಥವಾ ವ್ಯಾಪಾರ ಸರಕುಗಳು ಅಥವಾ ಕರೆನ್ಸಿಗಳು | ಸರಕುಗಳು ಅಥವಾ ವ್ಯಾಪಾರ ಸರಕುಗಳು ಅಥವಾ ಕರೆನ್ಸಿಗಳ ಮೌಲ್ಯದ ಮೇಲೆ ಪ್ರತಿ ಹತ್ತು ಸಾವಿರ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಒಂದು ರೂಪಾಯಿ. |
| (ಬಿ) ಯಾವುದೇ ಷೇರು, ಷೇರು ಪ್ರಮಾಣ ಪತ್ರ, ಸ್ಟಾಕ್ ಬಂಧಪತ್ರ, ಡಿಬೆಂಚರ್, ಡಿಬೆಂಚರ್ ಸ್ಟಾಕ್ ಅಥವಾ ಸರ್ಕಾರಿ ಭದ್ರತಾ ಪತ್ರವಾಗಿಲ್ಲದ ಇಂಥದೇ ಸ್ವರೂಪದ ಮಾರಾಟ ಮಾಡಬಹುದಾದ ಇತರ ಭದ್ರತಾ ಪತ್ರಗಳು | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಅಂಥ ಭದ್ರತಾ ಪತ್ರಗಳ ಮೌಲ್ಯದ ಮೇಲೆ, ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ |
| (ಸಿ) ಸರ್ಕಾರಿ ಭದ್ರತಾ ಪತ್ರಗಳು | ಸಂದರ್ಭಾನುಸಾರ ಭದ್ರತಾ ಪತ್ರಗಳ ಖರೀದಿ ಅಥವಾ ಮಾರಾಟದ ಕಾಲದಲ್ಲಿ ಆ ಭದ್ರತಾ ಪತ್ರಗಳ ಮೌಲ್ಯದ ಮೇಲೆ ಗರಿಷ್ಠ ಐವತ್ತು ರೂಪಾಯಿಗಳಿಗೆ ಒಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. |

| | |
|---|---|
| (ಡಿ) ವಶಾವಣೆ ಅಥವಾ ವಶಾವಣೇತರ ಆಧಾರಿತ (ವೃತ್ತಿಯ ಮತ್ತು ವ್ಯಾಪಾರದ) ವ್ಯವಹಾರಗಳಿಗೆ ಸಂಬಂಧಪಟ್ಟಂತೆ, ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ಬರುವಂಥವುಗಳನ್ನು ಹೊರತುಪಡಿಸಿದ ಭದ್ರತಾ ಪತ್ರಗಳು | ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ |
| (ಇ) ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ಬರುವಂಥವುಗಳನ್ನು ಹೊರತುಪಡಿಸಿ ಭವಿಷ್ಯತ್ ಭದ್ರತಾ ಪತ್ರಗಳು ಭಾವೀ ಮತ್ತು ಐಚ್ಛಿಕ ವ್ಯಾಪಾರ. | ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ |
| (ಎಫ್) ವ್ಯಾಪಾರ ಸರಕುಗಳ ವಾಯಿದಾ ಕರಾರುಗಳ ಬಗ್ಗೆ<br><br>**ವಿವರಣೆ.**– (ಬಿ), (ಡಿ) ಮತ್ತು (ಇ) ಖಂಡಗಳ ಉದ್ದೇಶಗಳಿಗಾಗಿ **"**ಭದ್ರತಾ ಪತ್ರಗಳು**"** ಎಂದರೆ, ಭದ್ರತಾ ಪತ್ರಗಳ ಕರಾರು (ವಿನಿಯಮ) ಅಧಿನಿಯಮ, 1956ರ (2) ನೇ ಪ್ರಕರಣದ (ಎಚ್) ಖಂಡದಲ್ಲಿ ಪರಿಭಾಷಿಸಲಾದ ಭದ್ರತಾ ಪತ್ರಗಳು | ಗರಿಷ್ಠ ಐವತ್ತು ರೂಪಾಯಿಗಳಿಗೊಳಪಟ್ಟು ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ |

**Xx Xx Xx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಪ್ರಿ7, ಕಾಸೂ , 1157–ಪ್ರತಿಗಳು 1000, 21ನೇ ಮಾರ್ಚ್, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**
**(Adjourned Meetings)**

# THE KARNATAKA STAMP (AMENDMENT) BILL 2017
## (L.A. Bill No. 11 of 2017)

A Bill further to amend the Karnataka Stamp Act, 1957

Whereas it is expedient further to amend the Karnataka Stamp Act, 1957 (Karnataka Act 34 of 1957) for the purposes hereinafter appearing;

Be it enacted by the Karnataka State Legislature in the Sixty-eighth Year of Republic of India as follows:-

**1. Short title and commencement.-** (1) This Act may be called the Karnataka Stamp (Amendment) Act, 2017.

(2) It shall come into force with effect from the first day of April, 2017.

**2. Amendment of section 30.-** In the Karnataka Stamp Act, 1957 (Karnataka Act 34 of 1957) (hereinafter referred to as the Principal Act), in section 30, after clause (f), and the entries relating thereto, the following shall be inserted, namely:-

"(g) in the case of an acknowledgement of debt [Art. 1(i)] - by the Debtor;

(h) in the case of an acknowledgement of a letter, article, etc., [Art. 1(ii)] - by the Person owning the letter, article etc.,;

(i) in the case of an adoption deed [Art.3]- by the adopter;

(j) in the case of an affidavit [Art.4] - by the executant;

(k) in the case of an agreement for sale of bill of exchange [Art.5(a)]- by the Purchaser;

(l) in the case of an agreement for purchase or sale of a Government security [Art.5(b)]- by the purchaser;

(m) in the case of an agreement for purchase or sale of shares, stocks [Art.5(c)]- by the purchaser;

(n) in the case of an agreement for transaction of lease-cum-sale[Art.5(d)] - by the lessee;

(o) in the case of any instrument of lease-cum-sale effected by the Bengaluru Development Authority or the Karnataka Housing Board [Art.5 (da)] - by the Lessee;

(p) in the case of agreement for sale of immovable property [Art.5(e)] - by the purchaser;

(q) in the case of agreement for construction or development of an immovable property [Art.5(f)] - by the developer;

(r) in the case of agreement for sale of movable property [Art. 5(g)]- by the purchaser;

(s) in the case of agreement to mortgage [Art. 5(h)]- by the mortgager;

(t) in the case of contract between the Depository Participant and client for opening de-mat account [Art.5 (i)] - by the client;

(u) in the case of agreement relating to contract between stock broker or sub broker and client (principal) for Stock Market operations [Art. 5 (i-a)] - by the client;

(v) in the case of agreement relating to advertisement or telecasting or broadcasting of programs for promotion and development of business [Art.5(i-b)] - by the advertiser;

(w) in the case of agreement relating to assignment or transfer of intellectual property rights [Art.5(i-c)] - by the assignee;

(x) in the case of agreement relating to building works or labour or services (works contracts) [Art.5 (i-d)] - by the person entrusting the works or availing the services;

(y) in the case of chit agreement [Art.5(i-e)] - by the chitster;

(z) in the case of agreement if not otherwise provided for [Art.5(j)] - by the executant;

(za) in the case of appointment in execution of a power [Art.-7] - by the executant;

(zb) in the case of appraisement or valuation [Art.-8] - by the person availing the services;

(zc) in the case of apprenticeship deed [Art.-9] - by the apprenticee;

(zd) in the case of articles of association of a company [Art.-10] - by the company;

(ze) in the case of award [Art.-11] - by the awardee;

(zf) in the case of cancellation of instruments [Art.-14] - by the executant;

(zg) in the case of certificate or other document evidencing the title of the holder thereof or any other person, either to any share, scrip or stock [Art.-16]- by the company issuing share, scrip or stock;

(zh) in the case of charter-party [Art.-18]- by the charterer or shipper;

(zi) in the case of clearance list [Art.18-A]- by the investors;

(zj) in the case of composition deed [Art.19]- by the debtor;

(zk) in the case of copy or extract [Art.21]- by the applicant;

(zl) in the case of counterpart or duplicate [Art.22]- by the person who paid the stamp duty on the original document;

(zm) in the case of delivery order in respect of goods [Art.24] - by the importer;

(zn) in the case of divorce deed of marriage [Art.25]- by the divorcer;

(zo) in the case of gift deed [Art.28]- by the donee;

(zp) in the case of letter of allotment of shares, in any company [Art.31]- by the company;

(zq) in the case of letter of licence [Art.32] - by the debtor;

(zr) in the case of licence of immovable or moveable property [Art.32-A] - by the licensee;

(zs) in the case of memorandum of association of a company [Art.33] - by the company;

(zt) in the case of mortgage of a crop [Art.35] - by the mortgagor;

(zu) in the case of Notarial act [Art.36] - by the applicant;

(zv) in the case of Note or Memorandum or record of transactions (electronic or otherwise) - Sent by a broker or agent [Art.37]- by the Investors;

(zw) in the case of Note of protest by the master of a ship [Art.38]- by the charterer or shipper or the consignee or the importer as the case may be;

(zx) in the case of partnership- instrument of constitution [Art.40(A)] - by the partnership firm;

(zy) in the case of partnership- instrument of reconstitution [Art.40(B)] - by the partnership firm;

(zz) in the case of partnership – instrument of dissolution [Art.40-(C)(a)] - by the outgoing partner to whom the property is allotted;

(zza) in any other case [Art.40-(C)(b)]- by the partnership firm;

(zzb) in the case of limited liability partnership [Art.40-A]- by the limited liability partnership;

(zzc) in the case of protest of bill or note [Art.42] - by the beneficiary;

(zzd) in the case of protest by the master of a ship [Art.43]- by the charterer or shipper or the consignee or the importer as the case may be;

(zze) in the case of share warrants, to bearer issued under the Companies Act. [Art.49]- by the company;

(zzf) in the case of shipping order [Art.50]- by the shipper;

(zzg) in the case of surrender of lease [Art.51]- by the lessee;

(zzh) in the case of transfer- of any property under section 25 of the Administrator General Act, 1963 [Art.52-(c)]- by the beneficiary;

(zzi) in the case of transfer- of any trust property [Art.52-(d)]- by the trust or trustee or beneficiary as the case may be;

(zzj) in the case of transfer of lease [Art.53] - by the transferee;

(zzk) in the case of transfer of licence [Art.53-A]- by the transferee;

(zzl) in the case of Trust- declaration of or concerning, any property [Art.54]- by the author of the Trust; and

(zzm) in the case of warrant for goods [Art.55]- by the owner of the goods;"

**3. Amendment of section 52-A.-** In section 52-A of the Principal Act,

(i) in clause (i) the word 'or' shall be omitted; and

(ii) the clause (ii) and the entries relating thereto shall be omitted.

**4. Insertion of new section 52-B.-** After section 52-A of the principal Act, the following shall be inserted, namely:-

"**52-B. Invalidation of stamps.-** Notwithstanding anything contained in Sections 47,48,49,50,51 and 52, any stamps, which have been purchased, but have not been used or in respect of which no allowance has been claimed as under the provisions of the Act and the period of six months from the date of purchase of such stamps has not elapsed, may be used before a period of six months from the date of purchase of stamps or delivered for claiming the allowance within the period allowed for claiming the same under the relevant provisions of the Act; but not beyond the period of six months from the date of commencement of the Karnataka Stamp (Amendment) Act, 2017 whichever is later and any stamps not so used or not so delivered within the period aforesaid shall be rendered invalid."

**5. Amendment of Schedule.-** In the schedule to the Principal Act,-

(A) in article 20, in clause (4), in column 2, for the words and figures "under Section 394 of the Companies Act, 1956", the words and figures "or appropriate Tribunals or appropriate Authorities under the Companies Act, 2013" shall be substituted.

(B) in article 37,-

(i) in clause (a) for the entries, in column (3), the following shall be substituted, namely:-

"Thirty paise for every ten thousand or part thereof on the value of goods or commodities or currencies.";

(ii) in clause (b), for the entries, in column (3), the following shall be substituted, namely:-

"Thirty paise for every ten thousand or part thereof on the value of such security at the time of its purchase or sale, as the case may be.";

(iii) in clause (c), for the entries, in column (3), the following shall be substituted, namely:-

"Thirty paise for every ten thousand or part thereof on the value of such security at the time of its purchase or sale, as the case may be.";

(iv) in clause (d), for the entries, in column (3), the following shall be substituted, namely:-

"Thirty paise for every ten thousand or part thereof."

(v) in clause (e), for the entries, in column (3), the following shall be substituted, namely:-

"Thirty paise for every ten thousand or part thereof."; and

(vi) in clause (f), for the entries, in column (3), the following shall be substituted, namely:-

"Thirty paise for every ten thousand or part thereof."

## STATEMENT OF OBJECTS AND REASONS

To give effect to the proposal made in the Budget speech of 2017-18. It is considered necessary to amend the Karnataka Stamp Act, 1957 (Karnataka Act 34 of 1957), and to make consequential amendments.

Hence the Bill.

**FINANCIAL MEMORANDUM**

There is no extra expenditure involved in the proposed legislative measure.

**KAGODU THIMMAPPA**
Minister for Revenue

**S. Murthy**
Secretary (I/C)
Karnataka Legislative Assembly

## ANNEXURE

## Extract from thee Karnataka Stamp Act, 1957

## (Karnataka Act 34 of 1957)

**XX** **XX** **XX**

**30. Duties by whom payable.-** In the absence of an agreement to the contrary, the expense of providing the proper stamp shall be borne,—

**XX** **XX** **XX**

(f) in the case of an instrument of partition—by the parties thereto in proportion to their respective shares in the whole property partitioned, or, when the partition is made in execution of an order passed by a Revenue authority or Civil Court or arbitrator, in such proportion as such authority, Court or arbitrator directs.

**XX** **XX** **XX**

**52A. Power of State Government to grant relief.-** Notwithstanding anything in the preceding sections of this Chapter, the State Government, after consultation with the Chief Controlling Revenue Authority, if satisfied that it is just and equitable to grant relief in any case or class of cases,—

(i) other than those to which any of the said sections is applicable; or

(ii) after the period specified in any of the said sections, may by order direct the grant of such relief as may be specified in the order and the Deputy Commissioner shall dispose of the case or class of cases conformably to such order.

**XX** **XX** **XX**

**SCHEDULE**

Stamp Duty on Instruments

**XX** **XX** **XX**

20. (1) For Conveyance

**XX** **XX** **XX**

(4) If relating to an order made by the High Court under section 394 of the Companies Act, 1956 in respect of,-

(i) Amalgamation of Companies, including a subsidiary amalgamating with parent company

**XX** **XX** **XX**

37. Note or Memorandum or record of transactions (Electronic or otherwise)

**XX** **XX** **XX**

| | |
|---|---|
| (a) Of any Goods or commodities or currencies | One rupee for every ten thousand or part thereof on the value of Goods or commodities or currencies, subject to a maximum of fifty rupees |
| (b) Of any share, scrip, stock, bond, debenture, debenture stock or other marketable security of a like nature, not being a government security | One rupee for every ten thousand or part thereof on the value of such security at the time of its purchase or sale, as the case may be, subject to a maximum of fifty rupees |
| (c) of a Government Security | one rupee for every ten thousand or part thereof of the value of the security, at the time of its purchase or sale, as the case may be, subject to a maximum of rupees fifty |
| (d) Of securities other than those falling under clause (b) above, in respect of either delivery or non delivery based (jobbing and trading) transactions | one rupee for every ten thousand or part thereof subject to a maximum of fifty rupees |

| | |
|---|---|
| (e) Of futures and options trading, of securities other than those falling under clause (b) above,: | one rupee for every ten thousand or part thereof subject to a maximum of fifty rupees |
| (f) Of forward contracts of commodities: | one rupee for every ten thousand or part thereof subject to a maximum of fifty rupees |

**Explanation:** For the purposes of clauses (b), (d) and (e) , "securities" means, the securities as defined in clause (h) of section (2) of the Securities Contract (Regulation) Act, 1956.

**XX** **XX** **XX**

Government Press, Vikasa Soudha Unit, Bengaluru 21st March, 2017 P7, W.D.1157, Copies 1000